# ವಿಶ್ವಕಪ್ ಸಾಧನೆಯಲ್ಲಿ ಕನ್ನಡತಿ

**ಕರ್ನಾಟಕದ ಪೊನ್ನಂಪೇಟೆಯ ಪೊನ್ನಮ್ಮ ಜೂನಿಯರ್ ಹಾಕಿಯಲ್ಲಿ ದಿಟ್ಟ ಸಾಧನೆ ತೋರುತ್ತಿರುವ ಪೊನ್ನಮ್ಮ, ಸೀನಿಯರ್ ತಂಡದಲ್ಲೂ ದೇಶವನ್ನು ಪ್ರತಿನಿಧಿಸಬೇಕೆನ್ನುವ ಕನಸು ಹೊಂದಿದ್ದಾರೆ.**

■ ಪ್ರಮೋದ್ ಜಿ.ಕೆ.




'ಜೂನಿಯರ್ ವಿಶ್ವಕಪ್‌ನಲ್ಲಿ ಭಾರತ ಒಮ್ಮೆಯೂ ಪದಕ ಜಯಿಸಿರಲಿಲ್ಲ. ಅದರೆ ಈ ಸಾಧನೆ ಮೊದಲ ಸಲ ಮೂಡಿ ಬಂದಾಗ ನಾನೂ ತಂಡದ ಸದಸ್ಯೆಯಾಗಿದ್ದೆ ಎನ್ನುವುದೇ ಖುಷಿಯೇ ವಿಚಾರ...'

–ಹೀಗೆ ಸಂಭ್ರಮವನ್ನು ಹಂಚಿಕೊಂಡಿದ್ದು ಕರ್ನಾಟಕದ ಮಲ್ಲಮಡ ನರೇಂದ್ರ ಪೊನ್ನಮ್ಮ. ಜರ್ಮನಿಯಲ್ಲಿ ಹೋದ ವಾರ ನಡೆದ ಜೂನಿಯರ್ ವಿಶ್ವಕಪ್‌ನಲ್ಲಿ ಕಂಚಿನ ಪದಕ ಗೆದ್ದ ಭಾರತ ತಂಡದಲ್ಲಿದ್ದ ಕರ್ನಾಟಕದ ಏಕೈಕ ಆಟಗಾರ್ತಿ ಇವರು. ಜರ್ಮನಿಯಲ್ಲಿ ನಡೆದ ಟೂರ್ನಿಯಲ್ಲಿ ಭಾರತ ತಂಡ ಪೆನಾಲ್ಟಿ ಶೂಟೌಟ್‌ನಲ್ಲಿ 3–2ರಲ್ಲಿ ಇಂಗ್ಲೆಂಡ್ ತಂಡವನ್ನು ಮಣಿಸಿ ಈ ಸಾಧನೆ ಮಾಡಿತ್ತು.

ಬಾಲ್ಯದಿಂದಲೂ ಹಾಕಿಯತ್ತ ಪ್ರೀತಿ ಬೆಳೆಸಿಕೊಂಡಿದ್ದ ಪೊನ್ನಮ್ಮ ಅದೇ ಕ್ರೀಡೆಯಲ್ಲಿ ಸಾಧನೆ ಮಾಡಬೇಕೆನ್ನುವ ತುಡಿತ ಹೊಂದಿದವರು. ಅವರ ಕನಸು ನನಸಾಗಲು ವೇದಿಕೆಯಾಗಿದ್ದು ಮಡಿಕೇರಿಯಲ್ಲಿರುವ ಭಾರತ ಕ್ರೀಡಾ ಪ್ರಾಧಿಕಾರ.

ಚಿಕ್ಕ ವಯಸ್ಸಿನಲ್ಲಿಯೇ ರೋಹ್ಟಕ್, ಭೋಪಾಲ್ ಹಾಗೂ ಸೋನೆಪತ್‌ನಲ್ಲಿ ನಡೆದ ಮೂರು ಸೀನಿಯರ್ ರಾಷ್ಟ್ರೀಯ ಟೂರ್ನಿಗಳಲ್ಲೂ ಆಡಿ ಹಿರಿಯ ಆಟಗಾರ್ತಿಯರಿಂದ ಸೈ ಎನಿಸಿಕೊಂಡಿದ್ದರು. ತಂದೆ ನರೇಂದ್ರ ಸೈನ್ಯದಲ್ಲಿದ್ದ ಕಾರಣ ಶಿಸ್ತು ಸಹಜವಾಗಿಯೇ ಬದುಕಿನ ಜೊತೆಜೊತೆಗೆ ಬಂದಿತ್ತು. ರಾಜ್ಯ ಮಟ್ಟದ ಸಬ್ ಜೂನಿಯರ್, ಜೂನಿಯರ್ ಟೂರ್ನಿಗಳಲ್ಲೂ ಇವರು ಛಾಪು ಮೂಡಿಸಿದ್ದಾರೆ. ಈ ಟೂರ್ನಿಗಳಲ್ಲಿ ತೋರಿದ ಸಾಧನೆ ಜೂನಿಯರ್ ತಂಡದಲ್ಲಿ ಸ್ಥಾನ ದೊರಕಿಸಿ ಕೊಟ್ಟಿತ್ತು.

ಕಷ್ಟದ ಹಾದಿಯಲ್ಲಿ ಸಾಗಿಬಂದ ಪೊನ್ನಮ್ಮ ಸಿಕ್ಕ ಅವಕಾಶವನ್ನು ಚೆನ್ನಾಗಿಯೇ ಬಳಸಿಕೊಂಡಿದ್ದಾರೆ. ಜೂನಿಯರ್ ತಂಡದ ಐತಿಹಾಸಿಕ ಸಾಧನೆಯ ಭಾಗವಾಗಿದ್ದಾರೆ. ಮಗಳ ಸಾಧನೆಯ ಬಗ್ಗೆ ಖುಷಿಯಿಂದಲೇ ಮಾತನಾಡಿದ ನರೇಂದ್ರ ಅವರು 'ಬೇರೆ ಕ್ರೀಡೆಗಳಿಗೆ ಸಿಗುವ ಬೆಂಬಲ ಹಾಕಿಗೂ ಲಭಿಸಲಿ. ಭಾರತ ಬಂಗಾರ ಜಯಿಸಿದ್ದರೆ ಇನ್ನೂ ಖುಷಿಯಾಗುತ್ತಿತ್ತು. ಭಾರತ ತಂಡಕ್ಕೆ ಆ ಸಾಮರ್ಥ್ಯ ಇತ್ತು. ಸೀನಿಯರ್ ವಿಭಾಗದಲ್ಲೂ ಮಗಳು ದೇಶವನ್ನು ಪ್ರತಿನಿಧಿಸಬೇಕು ಎಂಬ ಆಸೆ ನಮ್ಮದು' ಎಂದು ನುಡಿದರು.

'ತಂಡದಲ್ಲಿ ಸೀನಿಯರ್ ವಿಭಾಗದಲ್ಲಿ ಆಡಿದ ಅನುಭವ ಹೊಂದಿದ್ದ ಆಟಗಾರ್ತಿಯರೂ ಇದ್ದರು. ಇದು ಪದಕ ಗೆಲ್ಲಲು ನೆರವಾಯಿತು. ವಿಶ್ವಕಪ್ ಶುರುವಾಗುವ ಮುನ್ನ ಜರ್ಮನಿಯಲ್ಲಿ ಕೆಲ ಅಭ್ಯಾಸ ಪಂದ್ಯಗಳನ್ನು ಆಡಿ ಸಾಕಷ್ಟು ಪಾಠಗಳನ್ನು ಕಲಿತಿದ್ದೆವು' ಎಂದು ಪೊನ್ನಮ್ಮ ಅನುಭವಗಳನ್ನು ಮೆಲುಕು ಹಾಕಿದರು.

ಭಾರತ ಸೀನಿಯರ್ ತಂಡದ ಸಾಧನೆಯನ್ನು ಹೋಲಿಕೆ ಮಾಡಿದರೆ, ಜೂನಿಯರ್ ತಂಡ ಅಷ್ಟೊಂದು ಬಲಿಷ್ಠವಾಗಿಲ್ಲ. ಆದರೆ, ಈಗ ವಿಶ್ವಕಪ್‌ನಲ್ಲಿ ಪದಕ ಜಯಿಸಿದ್ದು ಕ್ರೀಡಾ ವಲಯದಲ್ಲಿ ಹೊಸ ಭರವಸೆಗೆ ಕಾರಣವಾಗಿದೆ. ವಿಶ್ವಕಪ್‌ನಲ್ಲಿ ಚಾರಿತ್ರಿಕ ಸಾಧನೆ ಮಾಡುವ ಮೂಲಕ ನಾವೂ ಯಾರಿಗಿಂತಲೂ ಕಡಿಮೆಯಿಲ್ಲ ಎನ್ನುವ ಸಂದೇಶವನ್ನು ಜೂನಿಯರ್ ಆಟಗಾರ್ತಿಯರು ನೀಡಿದ್ದಾರೆ. ಇಂತಹ ಸಾಧನೆಯಲ್ಲಿ ಕರ್ನಾಟಕದ ಆಟಗಾರ್ತಿಯೂ ಇದ್ದಾಳೆ ಎನ್ನುವುದು ಹೆಮ್ಮೆಯ ವಿಷಯ. ■